International Journal of Kannada Research 2021; 7(1): 74-77

International Journal of Kannada Research
www.kannadajournal.com

ISSN: 2454–5813
IJKR 2021; 7(1): 74-77
© 2021 IJKR
www.kannadajournal.com
Received: 07-11-2020
Accepted: 09-12-2020

ಸೌಮ್ಯಎಚ್ಎಲ್
ಸಹಾಯಕಪ್ರಾಧ್ಯಾಪಕಿ,
ಕನ್ನಡವಿಭಾಗ ನ್ಯೂಹಾರಿಜನ್
ಕಾಲೇಜು, ಮಾರತ್ತಹಳ್ಳಿ

Corresponding Author:
ಸೌಮ್ಯಎಚ್ಎಲ್
ಸಹಾಯಕಪ್ರಾಧ್ಯಾಪಕಿ,
ಕನ್ನಡವಿಭಾಗ ನ್ಯೂಹಾರಿಜನ್
ಕಾಲೇಜು, ಮಾರತ್ತಹಳ್ಳಿ

# ಕುವೆಂಪು ಸಾಹಿತ್ಯದಲ್ಲಿ ಪುರಾಣ ಮತ್ತು ಪ್ರಸ್ತುತತೆಯ ಬಿಂಬಗಳು

**ಸೌಮ್ಯಎಚ್ಎಲ್**

ಕುವೆಂಪು ಇಪ್ಪತ್ತನೆಯ ಶತಮಾನದ ಮಹಾಕವಿ, ಚಿಂತಕರು, ಅವರು ಕವಿಯೆಂಬ ಹೆಸರು ಪಡೆದಿದ್ದರೂ, ಅವರ ಚಿಂತನಾ ಪ್ರತಿಭೆ ಕೇವಲ ಕಾವ್ಯಕ್ಕೆ ಮಾತ್ರವೇ ಸೀಮಿತವಾಗಿಲ್ಲ. ಅದು ವಿಶಾಲಾರ್ಥದಲ್ಲಿ ಎಲ್ಲ ಬಗೆಯ ಸಾಹಿತ್ಯ ಸೃಷ್ಟಿಗೂ ಅನ್ವಯಿಸುತ್ತದೆ. ಸಣ್ಣ ಕಥೆ, ಕಾದಂಬರಿ, ನಾಟಕ, ಮಹಾಕಾವ್ಯ, ಲಲಿತ ಪ್ರಬಂಧ, ಜೀವನ ಚರಿತ್ರೆ, ಆತ್ಮಕಥೆ, ವಿಮರ್ಶೆ, ಮೀಮಾಂಸೆ, ಮಕ್ಕಳ ಸಾಹಿತ್ಯ ಈ ಎಲ್ಲ ಪ್ರಕಾರಗಳಲ್ಲೂ ಕುವೆಂಪು ಅವರು ತಮ್ಮ ಅಸಾಧಾರಣ ಪ್ರತಿಭೆಯನ್ನು ಮೆರೆದು ಯುಗದ ಕವಿ, ಜಗದಕವಿ, ಚಿಂತಕರೆನಿಸಿದ್ದಾರೆ. ಕುವೆಂಪು ಅವರು ಯಾವುದೇ ಪ್ರಕಾರವನ್ನು ಕುರಿತು ಬರೆಯಲಿ ಅದನ್ನು ತಮ್ಮ ವಿಶಿಷ್ಟ ತಾತ್ವಿಕ ಸ್ವರ್ಶದಿಂದ ಅದಕ್ಕೊಂದು ನವೀನತೆಯನ್ನು ತಂದುಕೊಡುತ್ತಾರೆ. ಒಂದರ್ಥದಲ್ಲಿ ಕುವೆಂಪು ಅವರ ಸಾಹಿತ್ಯ ಚಿಂತನೆಗಳಲ್ಲಿ ಕುವೆಂಪುತನದ ಸ್ವರ್ಶವನ್ನೇ ಕಾಣುತ್ತೇವೆ ಎಂದರೆ ಅತಿಶಯೋಕ್ತಿಯೇನಾಗಲಾರದು.

ಕುವೆಂಪು ಕಾದಂಬರಿಕಾರರಾಗಿ, ಕತೆಗಾರರಾಗಿ, ನಾಟಕಕಾರರಾಗಿ, ಕವಿಯಾಗಿ, ವಿಮರ್ಶಕರಾಗಿ ರೂಪುಗೊಳ್ಳುತ್ತಿದ್ದುದು ಬ್ರಿಟೀಷರ ಆಡಳಿತ ಪದ್ಧತಿಯ ಸುಮಾರಿಗೆ. ಅದನ್ನು ವಸಾಹತುಶಾಹಿಗಳ ಕಾಲ ಎನ್ನುತಿದ್ದರೂ 'ವಸಾಹತು ಅನ್ನುವುದು ಒಂದು ಜನರ ಮನೋಸ್ಥಿತಿ' ಎಂದು ಆಶೀಶ್ ನಂದಿ ಹೇಳುತ್ತಾರೆ. ಈ ವಸಾಹತುಶಾಹಿ ಸಂದರ್ಭದಲ್ಲಿ ಸಾಮಾಜಿಕ ಸುಧಾರಣೆ ಮುಖ್ಯವಾಗಿ ಒಂದು ಸಾಮಾನ್ಯ ಆಶಯವಾಗಿತ್ತು. ಅದು ಸಾಮಾಜಿಕ ಸಂದರ್ಭಕ್ಕನುಗುಣವಾದ ಸುಧಾರಣೆಯಾಗಿ ಪರಿವರ್ತಿಸಲ್ಪಡುತ್ತಿತ್ತು. ಉದಾ: ಬ್ರಾಹ್ಮಣ ಸಮಾಜದ ಸುಧಾರಣೆ, ಹೆಣ್ಣಿನ ಸ್ಥಾನಮಾನಕ್ಕೆ ಸಂಬಂಧಿಸಿದ ವಿಧವಾ ವಿವಾಹ, ಬಾಲ್ಯ ವಿವಾಹ, ಬಾಲ್ಯ ವಿವಾಹ ನಿರ್ಮೂಲನೆ, ಸ್ತ್ರೀ ಶಿಕ್ಷಣ ಮುಂತಾದವು ಮುಖ್ಯವಾಗಿದ್ದವು. ಇವುಗಳ ಜೊತೆಗೆ ಉಳಿದ ಸಾಮಾಜಿಕ ಅನಿಷ್ಟಗಳ ಬಗ್ಗೆ ಅರಿವು ಇದ್ದರೂ ಅದು ಚಳವಳಿಯ ವಿಷಯಗಳಾಗುವುದಿಲ್ಲ. ಇದರ ಜೊತೆಗೆ ಇತರೆಡೆ, ಮಹಾರಾಷ್ಟ್ರದ ಜ್ಯೋತಿ ಬಾಪುಲೆಯವರು, ಬ್ರಾಹ್ಮಣ ಸಮಾಜ ಹುಟ್ಟು ಹಾಕಿದ ಧಾರ್ಮಿಕ ಪದ್ಧತಿಗಳು ಸಾಮಾಜಿಕ ಸ್ಥಾನಮಾನಗಳನ್ನು ಮುಖ್ಯ ಸಮಸ್ಯೆಯನ್ನಾಗಿಟ್ಟುಕೊಂಡು ಶೂದ್ರ ಚಳವಳಿಯು ಪ್ರಬಲವಾಯಿತು. ವಸಾಹತುಶಾಹಿ

ಕಾಲದ ಬದುಕಿನ ಗಾಢ ಪ್ರಭಾವವನ್ನು ಬೀರುವ ಶಕ್ತಿಯಾಗಿ ಕಾಣಿಸಿಕೊಂಡಿತು. ಹೀಗೆ ಭಾರತದಲ್ಲಿ ವಸಾಹತುಶಾಹಿಯ ಕಲ್ಪನೆ, ಆಧುನಿಕತೆಯ ಪರಿವರ್ತನೆ ಬಯಲಿಗೆಳೆಯುವ, ಶೋಷಣೆಯಿಂದ ಬಿಡುಗಡೆಗೊಳಿಸುವ ಕಲ್ಪನೆ, ದಟ್ಟವಾಗಿ ಬೆಳೆಯಿತು. ಅದರ ಫಲವೆ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಈ ವಸಾಹತುಶಾಹಿಯು ಕಾದಂಬರಿಗಳ ಸೃಷ್ಟಿಗೆ ಕಾರಣವೆನ್ನಬಹುದು.

ಯಾವ ಬರಹಗಾರ ತನ್ನ ಕಾಲದಲ್ಲಿ ಜೀವಂತವಾಗಿ ಬದುಕಿರುತ್ತಾನೆಯೋ ಅವನಲ್ಲಿ ಆ ಕಾಲದ ಎಲ್ಲ ಮುಖ್ಯ ಸಂವೇದನೆಗಳು ನೆಲೆಯಾಗಿರುತ್ತವೆ. ಅಂತೆಯೇ ಆ ಸಂವೇದನೆಗಳಲ್ಲಿ ಕೆಲವುಗಳಿಗಾದರೂ ತನ್ನ ಕೃತಿಗಳ ಮೂಲಕ ಅಭಿವ್ಯಕ್ತಿ ನೀಡಿರುತ್ತಾನೆ. ಆ ಮೂಲಕ ಆ ಕಾಲದ ಸಾಧ್ಯತೆಗಳನ್ನು ಹಿಗ್ಗಿಸಿರುತ್ತಾನೆ. ಆ ಬಗೆಯಲ್ಲಿ ಕಳೆದ ಶತಮಾನದಲ್ಲಿ ಬದುಕಿದ ಕೆಲವೇ ಬರಹಗಾರರಲ್ಲಿ ಕುವೆಂಪು ಅವರು ಒಬ್ಬರಾಗಿದ್ದಾರೆ. ಆ ಮೂಲಕ ಆ ಕಾಲದ ಸಾಕ್ಷಿಪ್ರಜ್ಞೆಯೂ ಆಗಿದ್ದಾರೆ.

ಇವರ ಕಾಲದ ಅನೇಕ ಬರಹಗಾರರು ಅವರ ಸಂವೇದನೆ ಅರಳಿದ ನಿರ್ದಿಷ್ಟ ಕಾಲಘಟ್ಟವನ್ನು ಮೀರಿ, ಆನಂತರದ ಕಾಲಘಟ್ಟಗಳಿಗೆ ಪೂರ್ಣವಾಗಿ ತೆರೆದುಕೊಂಡಿಲ್ಲ. ಉದಾಹರಣೆಗೆ ನವೋದಯದ ಬರಹಗಾರರೆನ್ನಿಸಿಕೊಂಡ ಅನೇಕರು ನವ್ಯ, ಪ್ರಗತಿಶೀಲ, ದಲಿತ-ಬಂಡಾಯದ ಕಾಲಘಟ್ಟಗಳಲ್ಲಿ ಇದ್ದರೂ ಅವುಗಳ ಮುಖ್ಯ ಸಂವೇದನೆಗಳನ್ನು ತಮ್ಮ ಕೃತಿಗಳ ಒಳಕ್ಕೆ ತೆಗೆದುಕೊಳ್ಳಲಿಲ್ಲ. ಈ ಬಗೆಯಲ್ಲಿ ಬರಹಗಾರರು ಈ ಕಾಲಘಟ್ಟಗಳಲ್ಲಿ ಕೇವಲ ಬದುಕಿದ್ದರೇ ಹೊರತು ಸಂವೇದನಾಶೀಲ ನೆಲೆಯಲ್ಲಿ ಆ ಕಾಲಗಳಲ್ಲಿಯೂ ಬದುಕಿದ್ದರು ಎಂದು ಹೇಳಲಾಗದು. ಈ ಹಿನ್ನೆಲೆಯಲ್ಲಿ ಕುವೆಂಪು ಅವರು 'ನವ್ಯ'ವನ್ನು ಹೊರತುಪಡಿಸಿ, ಪ್ರಗತಿಶೀಲ ಮತ್ತು ದಲಿತ-ಬಂಡಾಯದ ಸಂವೇದನೆಗಳನ್ನು ತಮ್ಮೊಳಗು ಮಾಡಿಕೊಂಡರಲ್ಲದೆ ಈ ಎರಡೂ ಕಾಲಘಟ್ಟಗಳಲ್ಲಿ ತಮ್ಮ ಕೊಡುಗೆಗಳ ಮೂಲಕ ಸಹ ತಮ್ಮ ಜೀವಂತ ನೆಲೆಯನ್ನು ಪ್ರಕಟಪಡಿಸಿದರು. ಉದಾಹರಣೆಗೆ, 'ಪಾಂಚಜನ್ಯ' ಮತ್ತು 'ಕೋಗಿಲೆ ಮತ್ತು ಸೋವಿಯತ್ ರಷ್ಯಾ' ಕೃತಿಗಳು ಪ್ರಗತಿಶೀಲ ಸಾಹಿತ್ಯದ ಭಾಗವಲ್ಲದೆ ಬೇರೆಯಲ್ಲ. ಇಲ್ಲಿರುವ ವರ್ಗಸಂವೇದನೆ ಇದಕ್ಕೆ ಸಾಕ್ಷಿ. ಮಾರ್ಕ್ಸ್‌ವಾದದ ಓದು, ರಷ್ಯಾ ಮುಂತಾದೆಡೆಗಳಲ್ಲಿ ನಡೆದ ವರ್ಗ ಸಂಘರ್ಷ, ಆ ಹಿನ್ನೆಲೆಯಲ್ಲಿ ಭಾರತದಲ್ಲಿ ನಡೆಯುತ್ತಿದ್ದ ಹೋರಾಟಗಳು ಮತ್ತು ಮೂಡುತ್ತಿದ್ದ ಸಾಹಿತ್ಯ ಕೃತಿಗಳು- ಇವುಗಳ ಗ್ರಹಿಕೆ ಮತ್ತು ಅನುಭೂತಿಯಿಂದಲೇ ಇದರಲ್ಲಿ ಹೆಗ್ಗಡತಿಯಂತಹ ಕಾದಂಬರಿಗಳು ಹಾಗೂ ಮೇಲ್ಕಾಣಿಸಿದ 'ಪಾಂಚಜನ್ಯ' ಮತ್ತು 'ಕೋಗಿಲೆ ಮತ್ತು ಸೋವಿಯತ್ ರಷ್ಯಾ'ದಂತಹ ಸಂಕಲನಗಳು ಹೊರ ಬರಲು ಸಾಧ್ಯವಾದದ್ದು, ಇವುಗಳಲ್ಲಿ ಎರಡನೆಯದಾದ 'ಕೋಗಿಲೆ ಮತ್ತು ಸೋವಿಯತ್ ರಷ್ಯಾ' ಸಂಕಲನದಲ್ಲಿಯ 'ರೈತನ ದೃಷ್ಟಿ' ಪದ್ಯವನ್ನು ಸದ್ಯಕ್ಕೆ ಇಲ್ಲಿ ಉಲ್ಲೇಖಿಸಬಹುದು.

> ಕರಿಯರದೊ ಬಿಳಿಯರದೊ ಯಾರದಾದರೆ ಏನು?
> ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ
> ವಿಜಯನಗರವೊ? ಮೊಗಲರಾಳ್ವಿಕೆಯೊ? ಇಂಗ್ಲಿಷರೊ?
> ಎಲ್ಲರೂ ಜಿಗಣೆಗಳ ನನ್ನ ನೆತ್ತರಿಗೆ
> ಕತ್ತಿ ಪರದೇಶಿಯಾದರೆ ಮಾತ್ರ ನೋವೆ?
> ನಮ್ಮವರೆ ಹದಹಾಕಿ ತಿವಿದರದು ಹೂವೆ?

ಇದು ಆಳುವ ವರ್ಗವನ್ನು ಕುರಿತ ಆಳಿಸಿಕೊಳ್ಳುವ ವರ್ಗದ ವಕ್ತಾರರಲ್ಲೊಬ್ಬನಾದ ರೈತನ ದೃಷ್ಟಿ. ಈ ದೃಷ್ಟಿಕೋನದಲ್ಲಿ ಆಳುವ ವರ್ಗದಲ್ಲಿ ಮನೆತನಗಳು, ಪಕ್ಷಗಳು, ಸ್ವದೇಶಿಯರು, ವಿದೇಶಿಯರ ಎಂಬ ಬೇಧವಿದೆಯೇ ಹೊರತು ಅವರ ನಡುವೆ ಯಾವುದೇ ಮೂಲಭೂತ ವ್ಯತ್ಯಾಸವಿಲ್ಲ ಎಂಬ ನಿಲುವು ಇದೆ. ಇದು ವರ್ಗದೃಷ್ಟಿಯಲ್ಲದೆ ಬೇರೆಯಲ್ಲ. ಇದರೊಂದಿಗೆ ವರ್ಣದೃಷ್ಟಿಯ ಪದ್ಯಗಳು ಕೆಲವಿದ್ದರೂ ಭಾರತದಲ್ಲಿ ವರ್ಗ ಮತ್ತು ವರ್ಣಕ್ಕಿರುವ ಸಂಬಂಧ ಅತ್ಯಂತ ನಿಕಟವಾದುದು ಎಂಬುದನ್ನು ನೆನಪಿಸಿಕೊಳ್ಳಬಹುದು. ಉದಾಹರಣೆಗೆ, ಮೇಲ್ವರ್ಗ ಮತ್ತು ಮೇಲ್ವರ್ಣಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಉನ್ನತ ನೆಲೆಯಲ್ಲಿ ಇರುವಂಥವೇ ಅಲ್ಲವೇ? ಇದನ್ನು ಹೊರತುಪಡಿಸಿ ಸಹ, ಕೇವಲ ವರ್ಗ ಸಂವೇದನೆಯನ್ನು ಇಟ್ಟುಕೊಂಡಿರುವ ಅನೇಕ ಪದ್ಯಗಳನ್ನು ಈ ಎರಡೂ ಸಂಕಲನಗಳಲ್ಲಿ ಗಮನಿಸಬಹುದು.

ಹೀಗೆ ಪ್ರಗತಿಶೀಲ ಪಂಥದ ಕ್ರಿಯೆ, ಚಿಂತನೆ ಮುಂತಾದ ನೆಲೆಗಳನ್ನು ಹೊರತುಪಡಿಸಿ, ಕುವೆಂಪು ಅವರ ಈ ನಿರ್ದಿಷ್ಟ ಕಾಲಘಟ್ಟದ ಅನೇಕ ಕೃತಿಗಳನ್ನು ಊಹಿಸಿಕೊಳ್ಳಲು ಸಹ ಸಾಧ್ಯವಿಲ್ಲ. ಅಂತೆಯೇ ಪ್ರಗತಿಶೀಲ ಸಾಹಿತ್ಯಕ್ಕೆ ಇರುವ

ಕುವೆಂಪು ಅವರ ಕೊಡುಗೆಯನ್ನು ಸಹ ನಿರಾಕರಿಸಲು ಬರುವುದಿಲ್ಲ. ಈ ಮೂಲಕ ಕನ್ನಡ ಪ್ರಗತಿಶೀಲದಲ್ಲಿ ಕಾವ್ಯವೇ ಇಲ್ಲ ಎಂಬ ಅನೇಕರ ಹಳಹಳಿಕೆ ಕುವೆಂಪು ಅವರ ವರ್ಣ ಸಂವೇದನೆಯ ಪದ್ಯಗಳನ್ನು ಸೇರಿಸಿಕೊಂಡು ಯಾವುದೇ ಕವಿ ಬರೆದಿರುವ ವರ್ಗಸಂವೇದನೆಯ ಪದ್ಯಗಳನ್ನು ಗಣನೆಗೆ ತೆಗೆದುಕೊಂಡರೆ ಆ ಹಳಹಳಿಕೆ ಮತ್ತು ಈ ಮೂಲಕವಾಗಿ ವಿಮರ್ಶಕರು ಪ್ರಗತಿಶೀಲ ಪಂಥದಲ್ಲಿ ಬೆರಳಿಟ್ಟು ತೋರುವ ಕೊರತೆಯನ್ನು ತುಂಬಿದಂತಾಗುತ್ತದೆ.

ಹೀಗೆ ಪ್ರಗತಿಶೀಲದ ಕಾಲಘಟ್ಟದಲ್ಲಿ ಕೊಡು-ಕೊಳ್ಳುವಿಕೆಗಳ ಮೂಲಕ ಜೀವಂತವಾಗಿದ್ದ ಕುವೆಂಪು ಅವರು ದಲಿತ-ಬಂಡಾಯದವರಿಗೆ ಮೇಲಿಂದ ಮೇಲೆ ಮುಖ್ಯರಾಗಲಿಲ್ಲವೇ? ಕುವೆಂಪು ಅವರ ವೈಚಾರಿಕತೆ, ಅದರ ನೆಲೆಯಲ್ಲಿ ಪ್ರಕಟಿಸಿರುವ ವರ್ಗ ಮತ್ತು ವರ್ಣ ತಾರತಮ್ಯ ಕೇಂದ್ರಿತ ಯಾವುದೇ ಕೃತಿಗಳು ಈ ದಲಿತ-ಬಂಡಾಯದವರಿಗೆ ಮೇಲಿಂದ ಮೇಲೆ ಮುಖ್ಯವಾಗಲಿಲ್ಲವೇ? 'ಜಲಗಾರ', 'ಶೂದ್ರತಪಸ್ವಿ', 'ಬೆರಳ್ಗೆ ಕೊರಳ್' ಮುಂತಾದ ನಾಟಕಗಳು, ನಿರಂಕುಶಮತಿಗಳಾಗಿ', 'ವಿಚಾರ ಕ್ರಾಂತಿಗೆ ಆಹ್ವಾನ' ಮುಂತಾದ ವೈಚಾರಿಕ ಈ ನಿಟ್ಟಿನಲ್ಲಿ ಅತ್ಯಂತ ಮುಖ್ಯ ಅಲ್ಲವೇ? ನವೋದಯ ಕಾಲದಲ್ಲಿ ಸಾಹಿತ್ಯ ಕೃಷಿ ಆರಂಭಿಸಿದ ಕುವೆಂಪು ಅವರು ಆರಂಭದಲ್ಲಿಯೇ 'ಶೂದ್ರತಪಸ್ವಿ', 'ಜಲಗಾರ'ದಂತಹ ಕೃತಿಗಳನ್ನು ಕೊಟ್ಟಿದ್ದಾರೆಂದರೆ ಭಾವನಾ ಪ್ರಧಾನವಾದ ನವೋದಯದಲ್ಲಿ ತಮ್ಮ ಚಿತ್ತ ಮುಖ್ಯವಾಗಿ ಎತ್ತ ಇತ್ತು ಎಂಬುದು ಅರಿವಾಗುವುದಲ್ಲವೇ? ಆದ್ದರಿಂದಲೇ ಅಲ್ಲವೇ-

ನನ್ನ ಕೃತಿ ಕೃತಿಯಲ್ಲ
ನಾನು ಕವಿಯಲ್ಲ
ಕಲೆಗಾಗಿ ಕಲೆಯೆಂಬ
ಪೊಳ್ಳು ನೆಲೆಯಿಲ್ಲ.

ಎಂಬ ಕವಿತೆಯನ್ನು 'ಕೋಗಿಲೆ ಮತ್ತು ಸೋವಿಯತ್ ರಷ್ಯಾ'ದಲ್ಲಿ ಹೊರತಂದದ್ದು, ಜನರಿಗಾಗಿ ಬದುಕಿದ, ಜನರಿಗಾಗಿ ಬರೆದ, ಪ್ರಶಸ್ತಿ-ಸನ್ಮಾನ, ವಿದ್ವಜ್ಜನರನ್ನೂ ಲೆಕ್ಕಿಸದ ನೆಲೆಯಲ್ಲಿ ಮಾತ್ರ ಅಲ್ಲವೇ ಇಂತಹ ಕೃತಿಗಳು, ನಿಲುವುಗಳು ಹೊರ ಹೊಮ್ಮುವುದು? ಈ ನೆಲೆಯಲ್ಲಿ ಕುವೆಂಪು ಅವರು ನವೋದಯದಲ್ಲಿ ಚಿಗುರೊಡೆದು ಅರಳಿದರೂ ಆ ಕಾಲಘಟ್ಟವನ್ನು ಮೀರಿದ ಬೇರೆ ಬೇರೆ ಸಾಹಿತ್ಯ ಪಂಥಗಳ ಕಾಲಘಟ್ಟಗಳಲ್ಲಿ ಸಹ ತೆರೆದ ಮನಸ್ಸಿನಿಂದ ಬದುಕಿದರು ಎಂಬುದಕ್ಕೆ ಅವರ ಕೃತಿಗಳೇ ಸಾಕ್ಷಿಯಾಗಿವೆ. ಈ ಬಗೆಯಲ್ಲಿ ಬಹಳಷ್ಟು ಬರಹಗಾರರು ಬದುಕಲು ಸಾಧ್ಯವಾಗಿಲ್ಲ. ಅದು ಬೇರೆಯೇ ಚರ್ಚೆ ಆಗುತ್ತದೆ. ಒಟ್ಟಾರೆಯಾಗಿ ಯಾವ ಬರಹಗಾರ ತನ್ನ ಕಾಲದಲ್ಲಿ ತೆರೆದ ಮನಸ್ಸಿನಿಂದ ಬದುಕುತ್ತಾನೆಯೋ ಅವನ ಸಂವೇದನೆಗಳು ಅನೇಕ ಆಗುತ್ತವೆ. ಅಂತೆಯೇ ಅಂತಹ ಬರಹಗಾರರ ಮೂಲಕ ಒಂದು ಕಾಲಘಟ್ಟದಿಂದ ಇನ್ನೊಂದು ಕಾಲಘಟ್ಟದ ಅವಧಿಯಲ್ಲಿ ಗುರುತರ ವ್ಯತ್ಯಾಸವಿರುವ ಸಾಹಿತ್ಯ ಕೃಷಿ ಮೂಡುತ್ತದೆ. ಈ ನೆಲೆಯಲ್ಲಿ ಆ ಬರಹಗಾರನ ಕೃತಿಗಳಲ್ಲಿ ಸಮಕಾಲೀನತೆಯ ಗುಣ ಮತ್ತು ವೈವಿಧ್ಯಮಯವೂ ಆಗಿರುತ್ತದೆ. ಅಂತಹ ಕೃತಿಗಳಿಗೆ ಹೆಚ್ಚು ಆಯಾಮಗಳೂ ಇರುತ್ತವೆ. ಅಂತಹ ಗುಣವನ್ನು ಹೊಂದಿರುವ ಬರಹಗಾರರ ಕೃತಿಗಳು ಸಾರ್ವಕಾಲಿಕವೂ ಆಗಿರುತ್ತವೆ. ಯಾಕೆಂದರೆ ಒಂದು ಕಾಲದ ಸಂವೇದನೆಗಳು, ಸವಾಲುಗಳು ಆ ನಿರ್ದಿಷ್ಟ ಕಾಲದ ಆಚೆಗೂ ಬಹು ಪ್ರಮಾಣದಲ್ಲಿ ಉಳಿದೇ ಇರುತ್ತವೆ. ಈ ನೆಲೆಯಲ್ಲಿ ಕುವೆಂಪು ಅವರು ಎದುರಿಸಿದ ಪ್ರಶ್ನೆಗಳು ಇಂದಿಗೂ ಇವೆಯಲ್ಲವೇ? ಉದಾಹರಣೆಗೆ ವರ್ಣ, ವರ್ಗ, ಜಾತಿ, ಕೋಮು, ಧರ್ಮ ಮುಂತಾದ ಸಾಮಾಜಿಕ ಪರಿಕಲ್ಪನೆಗಳೊಂದಿಗೆ ಭಾಷೆ, ರಾಜಕೀಯ, ಶಿಕ್ಷಣ ಮುಂತಾದ ಯಾವ ಪ್ರಶ್ನೆಗಳು ಇಂದು ಮೂಲಭೂತವಾಗಿ ಬದಲಾಗಿವೆ? ಆದ್ದರಿಂದಲೇ ಅಲ್ಲವೆ ಇವತ್ತಿನ ನಮ್ಮ ಅನೇಕ ಪ್ರಶ್ನೆಗಳಿಗೆ ಕುವೆಂಪು ಅವರು ಏನು ಹೇಳಿದ್ದಾರೆ ಎಂದು ಅವರತ್ತ ಹೊರಳುವುದು! ಈ ಹಿನ್ನೆಲೆಯಲ್ಲಿ ಅವರ ನಾಟಕಗಳು ಸಹ ನಮ್ಮನ್ನು ಕಾಡುತ್ತವೆ. ಆ ಮೂಲಕ ಅವು ನಮ್ಮ ಸಮಕಾಲೀನವೂ ಆಗುತ್ತವೆ.

**ಕುವೆಂಪು ನಾಟಕಗಳು ಮತ್ತು ಪುರಾಣಗಳು**

ಯಾವುದೇ ಒಬ್ಬ ಬರಹಗಾರ ತಾನು ಯಾವುದೇ ನಿಲುವಿಗೆ ಅಂತಿಮವಾಗಿ ಆದರೆ ಅದಕ್ಕೂ ಮುಂಚೆ ತನ್ನ ನೆಲದ ಗುಣ ಮತ್ತು ಅದರ ಚರಿತ್ರೆಯನ್ನು ಅರಿತಿರಬೇಕು, ಆಗ ಮಾತ್ರ ಆ ನಾಡಿನ ನಾಡಿಮಿಡಿತವನ್ನು ಅರಿತಂತಾಗುತ್ತದೆ. ಆನಂತರದಲ್ಲಿ ತನ್ನ ನಿಲುವು ಅಥವಾ ಆಶಯಕ್ಕೆ

ಅನುಗುಣವಾಗಿ ಒಂದು ಕಲಾಕೃತಿಯನ್ನು ನಿರ್ಮಿಸಬಹುದು. ಅದು ಕವಿತೆಯಾಗಿರಬಹುದು ಅಥವಾ ನಾಟಕವಾಗಿರಬಹುದು ಅಥವಾ ಇನ್ನಾವುದಾದರೂ ಪ್ರಕಾರವಾಗಿರಬಹುದು. ಅಲ್ಲೆಲ್ಲಾ ಆ ನಾಡಿನ ಸಾಂಸ್ಕೃತಿಕ ದ್ರವ್ಯವನ್ನು ಅರಗಿಸಿಕೊಂಡ ನೆಲ ಇರಬೇಕು. ಉದಾಹರಣೆಗೆ, ಷೇಕ್ಸ್ಪಿಯರ್‌ನಿಗೆ ಭೂತ-ಪ್ರೇತಗಳಲ್ಲಿ ನಂಬಿಕೆಯಿರದಿದ್ದರೂ ತನ್ನ ನಾಟಕಗಳಲ್ಲಿ ಅವುಗಳನ್ನು ಪ್ರವೇಶಗೊಳಿಸಲಿಲ್ಲವೇ? ಉದಾಹರಣೆಗೆ, ಹ್ಯಾಮ್ಲೆಟ್. ಹಾಗೆ ತನಗೆ ನಂಬಿಕೆಯಿರುವ ಅಥವಾ ನಂಬಿಕೆ ಇರದ ಎಲ್ಲ ಪರಿಕಲ್ಪನೆಗಳನ್ನು ಕೃತಿಯ ಚೌಕಟ್ಟಿನೊಳಗೆ ತಂದು, ಅವುಗಳನ್ನು ಇತರ ಪಾತ್ರ ಅಥವಾ ಪರಿಕಲ್ಪನೆಗಳೊಂದಿಗೆ ಸಾವಯವ ಸಂಬಂಧದಲ್ಲಿ ನೆಲೆಗೊಳಿಸಿದಾಗ ಆ ಕಲಾಕೃತಿಯೆನ್ನುವುದು ದಷ್ಟಪುಷ್ಟವಾಗಿ ರಕ್ತ ಮಾಂಸ ತುಂಬಿದ ಕೃತಿಯಾಗಿ ಕಾಣುವುದು. ಅದನ್ನು ನೋಡಲು ಸಹ ಸುಂದರವಾಗಿರುತ್ತದೆ. ಅಂತಹ ಕೃತಿ ಜನರ ಎದುರು ಗೆಲ್ಲುತ್ತದೆ. ಅದು ಗೆದ್ದಾಗ ಕೃತಿಕಾರ ತನ್ನ ಆಶಯವನ್ನು ಆ ಮೂಲಕ ಜನರಿಗೆ ಯಶಸ್ವಿಯಾಗಿ ತಲುಪಿಸಿದ್ದಾನೆ ಎಂಬಂತಾಗುತ್ತದೆಯಲ್ಲವೇ? ಈ ನೆಲೆಯಲ್ಲಿ ಒಂದು ನಾಡಿನ ಅಥವಾ ಆ ನಿರ್ದಿಷ್ಟ ನೆಲದ ನಾಡಿಮಿಡಿತದ ಭಾಗವಾಗಿರುವ ಪುರಾಣಗಳನ್ನು ಸಹ ಅರಿಯುವುದು ಆ ನಾಡಿನ ಯಾವುದೇ ಸಾಂಸ್ಕೃತಿಕ ವಕ್ತಾರನಿಗೆ ಕೇವಲ ಅನಿವಾರ್ಯವಾಗುತ್ತದೆ. ಈ ತಾತ್ವಿಕ ನೆಲೆಯಲ್ಲಿ ಕುವೆಂಪು ಅವರು ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಭಾರತೀಯ ಪುರಾಣಗಳನ್ನು ಅರಿತಿದ್ದಾರೆ. ಅವರ ಕಾಲಕ್ಕೆ ಇದೇ ನೆಲದ ಅವಿಭಾಜ್ಯ ಭಾಗವಾದ ಜನಪದ ಪುರಾಣಗಳು ಶೈಕ್ಷಣಿಕ ಶಿಸ್ತಿನ ಒಳಕ್ಕೆ ಪ್ರವೇಶ ಪಡೆಯದಿದ್ದರಿಂದಲೋ ಏನೋ ಕುವೆಂಪು ಅವರು ಅವುಗಳನ್ನು ಸಹ ತಮ್ಮ ಪ್ರಜ್ಞಾ ಭಾಗ ಮಾಡಿಕೊಳ್ಳಲಿಲ್ಲ. ಈ ಹಿನ್ನೆಲೆಯಲ್ಲಿ ಅವರ 'ಯಮನ ಸೋಲು', 'ಮಹಾರಾತ್ರಿ', 'ವಾಲ್ಮೀಕಿಯ ಭಾಗ್ಯ', 'ಕಾನೀನ', 'ನನ್ನ ಗೋಪಾಲ', 'ಶ್ಮಶಾನ ಕುರುಕ್ಷೇತ್ರ', 'ಬೆರಳ್ಗೆ ಕೊರಳ್', 'ಶೂದ್ರತಪಸ್ವಿ', 'ಜಲಗಾರ', 'ಚಂದ್ರಹಾಸ' ಮುಂತಾದ ನಾಟಕಗಳನ್ನು ಗಮನಿಸಬಹುದು. ಅವರು ಬರೆದ ಒಟ್ಟು ಹದಿನಾಲ್ಕು ನಾಟಕಗಳಲ್ಲಿ ಇಲ್ಲಿಯೇ ಅವರ ನಾಟಕಗಳಿಗೂ ಪುರಾಣಗಳಿಗೂ ಇರುವ ಸಂಬಂಧ ಎಷ್ಟು ನಿಕಟವಾದುದು ಎಂಬುದನ್ನು ಮಾತ್ರ. ಅವುಗಳಲ್ಲಿ ಎರಡು ರೂಪಾಂತರದ ನಾಟಕಗಳು. ಅವುಗಳಲ್ಲಿ ಒಂದು- "ಬಿರುಗಾಳಿ'. ಹತ್ತು ನಾಟಕಗಳು ಪ್ರಸ್ತುತ ತಾತ್ವಿಕತೆಯ ಚೌಕಟ್ಟಿಗೆ ಒಳಪಟ್ಟಿದೆಯೆಂದರೆ ಈ ಮೂಲಕ ಕುವೆಂಪು ನಾವು ಅರಿಯಬಹುದೆನ್ನಿಸುತ್ತದೆ. ಇವುಗಳನ್ನು ಹೊರತುಪಡಿಸಿ ಉಳಿಯುವ ನಾಟಕಗಳು ನಾಲ್ಕು ಅದು ಷೇಕ್ಸ್ಪಿಯರ್‌ನ 'ದಿ ಟೆಂಪೆಸ್ಟ್' ನಾಟಕದ ರೂಪಾಂತರ. ಇನ್ನೊಂದು- 'ರಕ್ತಾಕ್ಷಿ. ಇದು ಇದೇ ನಾಟಕಕಾರನ 'ಹ್ಯಾಮ್ಲೆಟ್' ನಾಟಕದ ರೂಪಾಂತರ. ಉಳಿದವು 'ಮೋಡಣ್ಣನ ತಮ್ಮ' ಎಂಬ ಮಕ್ಕಳ ನಾಟಕ ಹಾಗೂ 'ಬಲಿದಾನ' ಎಂಬ ಭಾರತದ ಸ್ವಾತಂತ್ರ್ಯೋತ್ತರದ ಸವಾಲುಗಳನ್ನು ಬಿಂಬಿಸುವ ನಾಟಕ ಆಗಿವೆ.

ಇಷ್ಟರ ಮಟ್ಟಿಗೆ ಕುವೆಂಪು ಅವರ ನಾಟಕಗಳಲ್ಲಿ 'ಪುರಾಣ' ಇರುವುದಾದರೂ ಅವುಗಳ ಬಗೆಗೆ ಜನಸಾಮಾನ್ಯರಿಗೆ ಇರುವ ಆರಾಧನಾ ಮನೋಭಾವ ಅವರಿಗೆ ಇಲ್ಲ ಎಂಬುದು ಗಮನೀಯ. ಬದಲಿಗೆ ಇವುಗಳನ್ನು ಸಮಕಾಲೀನ ಅಥವಾ ವರ್ತಮಾನ ಸಂವೇದನೆಗಳ ಕುಲುಮೆಯಲ್ಲಿ ಕರಗಿಸಿ, ಅವುಗಳಲ್ಲಿ ಪುನಃ ಹೊರಗೆ ಜೀವಂತವಾಗಿ ತಂದಿದ್ದಾರೆ. ಈ ಮೂಲಕವಾಗಿ ಇವುಗಳ ಶರೀರ ಮರಾಣವಾದರೂ ಪ್ರಾಣವು ವರ್ತಮಾನದ್ದು ಎಂಬುದು ಮುಖ್ಯ. ಅಂತೆಯೇ ಷೇಕ್ಸ್‌ಪಿಯರ್‌ನ ನಾಟಕಗಳ ಶರೀರ ಪುರಾಣ ಮತ್ತು ಚರಿತ್ರೆಯದ್ದಾದರೂ ಜನರು ಇಂದಿಗೂ ಅವುಗಳನ್ನೇಕೆ ಆಸ್ವಾದಿಸುತ್ತಿದ್ದಾರೆ? ಅವುಗಳಲ್ಲಿ ವರ್ತಮಾನದ ಕಸುವಿದೆ ಎಂದಲ್ಲವೇ? ತೆರೆಯ ಮೇಲಿನ ಹೀರೋ ಯಾರಾದರೇನು ಅವನಲ್ಲಿ ನಮ್ಮನ್ನು ಕಾಣುತ್ತೇವಲ್ಲವೇ? ಹಾಗಾಗಿಯೇ ಅಲ್ಲವೇ ಕಾಲದ ಗಡಿ ಇತ್ಯಾದಿ ಇಲ್ಲಿ ಅಪ್ರಸ್ತುತವಾಗುವುದು.

ಈ ಹಿನ್ನೆಲೆಯಲ್ಲಿ ಕುವೆಂಪು ಅವರ ಪುರಾಣಪ್ರಜ್ಞೆ ಅದು ಕೇವಲ ವಸ್ತುವಿಗೆ ಮಾತ್ರ ಮುಖ್ಯವಾಗಿ ಸಂಬಂಧಿಸಿದ್ದು ಎಂಬುದನ್ನು ಇಲ್ಲಿ ಗಮನಿಸಬಹುದು. ಉಳಿದಂತೆ ಮೌಲ್ಯವಿವೇಚನೆ ಇತ್ಯಾದಿ ನಾಟಕಕಾರರ ಸೋಪಜ್ಞ ನೆಲೆಯದ್ದು ಎಂಬುದನ್ನು ಸಹ ಇಲ್ಲಿ ಗುರುತಿಸಬಹುದು.

ಆಕರ ಗ್ರಂಥ-ಕುವೆಂಪುರವರ ಸಮಗ್ರ ಸಾಹಿತ್ಯ ಸಂಪುಟಗಳು.